**"ಪ್ರವೀಣ"**

**ಕನ್ನಡ ಲೇಖಕ ಚಂದ್ರಕಾಂತ ಕುಸನೂರ (1931–2020) ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಬರೆದವರು. ಕವಿತೆ, ಕತೆ, ಕಾದಂಬರಿ, ನಾಟಕಗಳಲ್ಲಿ ಮಹತ್ತ್ವವಾದುದ್ದನ್ನು ಬರೆದೂ ನಿರ್ಲಕ್ಷ್ಯಕ್ಕೆ ಒಳಗಾದ ಲೇಖಕ ಅವರು. ಅವರು ಲೇಖಕ ಮಾತ್ರವಲ್ಲ, ಉತ್ತಮ ಚಿತ್ರಕಲಾವಿದರೂ ಕೂಡ. ಅವರ ಪ್ರತಿಭಾಪೂರ್ಣ ಬರಹಗಳು ಮತ್ತು ವ್ಯಕ್ತಿತ್ವದ ಬಗೆಗಿನ ಆಪ್ತ ಬರಹ ಇಲ್ಲಿದೆ.**

ಕತ್ತಲೆಯಲ್ಲಿ ಬತ್ತಲೆ ತಿರುಗುತ್ತಿರುವ
ನಮ್ಮ ಶೀಲ ಕನ್ನಿಕೆಗೆ
ಒಂದು ಬೆಳಕಿನ ಸೀರೆ ತರುವುದಿದೆ
ಬರುವಿರಾ?

ಎಂಬ ಅಪ್ರತಿಮ ಹಾಯ್ಕು ಬರೆದ ಚಂದ್ರಕಾಂತ ಕುಸನೂರ 19ನೇ ಏಪ್ರಿಲ್ 2020ರಂದು ತಮ್ಮ ದೇಹ ತ್ಯಜಿಸಿ ನಮ್ಮ ನೆನಪುಗಳಲ್ಲಿ, ಚಿಂತನೆಗಳಲ್ಲಿ ಶಾಶ್ವತವಾಗಿ ಇರಲು ಬಂದು ಬಿಟ್ಟರು. ಅವರ ಸಂಪರ್ಕಕ್ಕೆ ಬಂದ, ಅವರ ಮಾತುಗಳನ್ನು ಕೇಳಿದ ಯಾರೇ ಆದರೂ ಒಂದಿಷ್ಟಾದರೂ ವಿಚಲಿತಗೊಳ್ಳದೇ ಇರುತ್ತಿರಲಿಲ್ಲ. ಅವರೊಂದಿಗಿನ ಮಾತುಕತೆ ಅಷ್ಟು ಪ್ರಭಾವಶಾಲಿಯಾಗಿತ್ತು. ಕುಸನೂರರ ವೈವಿಧ್ಯಮಯ ಓದು, ಬಹುಭಾಷಾ ಪಾಂಡಿತ್ಯ, ನಾವೀನ್ಯದ ನಿರಂತರ ಶೋಧ, ಅಭಿವ್ಯಕ್ತಿಯಲ್ಲಿನ ಸತತ ಪ್ರಯೋಗಗಳು ಅವರ ದೃಷ್ಟಿಕೋನ ಮತ್ತು ಸಂವಹನದಲ್ಲಿ ವೈಶಿಷ್ಟ್ಯ ಮತ್ತು ಶಕ್ತಿಯನ್ನು ತುಂಬಿದ್ದವು.

ಮೊದಲ ಬಾರಿ ಅವರನ್ನು ನಾನು ಕಂಡು ಮಾತನಾಡಿಸಿ ವಾಪಸು ಮನೆಗೆ ಬರುವಾಗ ಅವರ ಯೋಚನೆಗಳಲ್ಲೇ ಕಳೆದು ಹೋದ ನೆನಪು. ನನ್ನ ಮೊದಲ ಪುಸ್ತಕವನ್ನು ಅವರಿಗೆ ಕೊಟ್ಟು ಅವರ ಮಾರ್ಗದರ್ಶನ ಪಡೆಯುವ ಉದ್ದೇಶದಿಂದ ಮೊದಲ ಬಾರಿ ಅವರ ಮನೆಗೆ ಹೋದದ್ದು. ಬೆಳಗಾವಿಯ ಚನ್ನಮ್ಮ ನಗರದಲ್ಲಿರುವ ಅವರ ಮನೆಗೆ ದಾರಿ ಗೊತ್ತಿಲ್ಲದ್ದರಿಂದ ಅವರನ್ನೇ ಸಂಪರ್ಕಿಸಿ ಪ್ರತಿಯೊಂದು ಹೊರಳು ದಾರಿಗಳಲ್ಲಿ ಅವರ ಮೊಬೈಲಿಗೆ ಕರೆ ಮಾಡಿ ಕೊನೆಗೂ